ಇ) ಇಲ್ಲ.

ಈ) ಇದುವರೆಗೆ ಯಾವುದೇ ಹಣ ಖರ್ಚು ಮಾಡಿರುವುದಿಲ್ಲ.

ಉ) ಸ್ಥಳೀಯರ ಬೇಡಿಕೆಗಳಿಗೆ ಸ್ಪಂದಿಸಿ ಮೂಲ ಪ್ರಸ್ತಾವನೆಯನ್ನು ಮಾರ್ಪಡಿಸಿ ಹಾಗೂ ಪರಿಷ್ಕರಿಸುವ ಪ್ರಕ್ರಿಯೆಯಲ್ಲಿನ ವಿಳಂಬದಿಂದಾಗಿ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ.

ಊ) 2005–06ನೇ ಸಾಲಿನ ಆರ್ಥಿಕ ವರ್ಷದಲ್ಲಿ ಯೋಜನೆಗೆ ಅನುದಾನವನ್ನು ಒದಗಿಸಿಕೊಳ್ಳಲು ಪ್ರಯತ್ನಿಸಲಾಗುವುದು.

ಋ) ಯೋಜನೆಗೆ ತಾತ್ವಿಕ ಒಪ್ಪಿಗೆ ನೀಡಿರುವುದರಿಂದ ಶಂಕು ಸ್ಥಾಪನೆ ನೆರವೇರಿಸಿದ್ದು ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

255 (638) : ಶ್ರೀ ಜೀವರಾಜ್ ಡಿ.ಎನ್. (ಶೇಂಗೇರಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈಲ್ವೆ ಹಾಗೂ ಬಸ್ ನಿಲ್ದಾಣಗಳಲ್ಲಿರುವ ರಿಸರ್ವ ಪಾವತಿ ಆಟೋರಿಕ್ಷಾ ಕೌಂಟರ್‌ಗಳು ಪ್ರಮುಖ ವೇಳೆಗಳಲ್ಲಿ ಅದರಲ್ಲೂ ಬೆಳಗಿನ ಜಾವಗಳಲ್ಲಿ ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ಆಟೋರಿಕ್ಷಾದವರು ದುಬಾರಿ ದರ ಬೇಡುತ್ತಿರುವುದು ಸಹ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹೆಚ್ಚಿನ ಆಟೋರಿಕ್ಷಾಗಳ ಮೀಟರ್ ದುಬಾರಿ ದರ ತೋರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಎಲ್ಲಾ ಮೇಲ್ಕಂಡ ವಿಷಯದ ಬಗ್ಗೆ ಸರ್ಕಾರವು ಎಂದು ಮತ್ತು ಯಾವ ರೀತಿಯ ಕ್ರಮಕ್ಕೈಗೊಳ್ಳಲಿದೆ?

ಉ) ಈ ರೀತಿ ದೇಶದ ಎಲ್ಲಾ ಭಾಗಗಳಿಂದ ಬರುವ ಪ್ರಯಾಣಿಕರಿಗೆ ತೊಂದರೆಯಾಗುವುದರಿಂದ ಬೆಂಗಳೂರು ನಗರದ ಬಗ್ಗೆ ಕೆಟ್ಟ ಅಭಿಪ್ರಾಯ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಈ) ಸಾರಿಗೆ ಇಲಾಖೆಯು ಬೆಂಗಳೂರು ನಗರದಲ್ಲಿ ಕಾನೂನು ಮಾಪನ ಇಲಾಖೆ (ಕಂಟ್ರೋಲರ್ ಆಫ್ ವೇಯ್ಟ್ಸ್ ಅಂಡ್ ಮೆಷರ್ಸ್) ಮತ್ತು ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ತಪಾಸಣಾ ಕಾರ್ಯವನ್ನು ಹಮ್ಮಿಕೊಂಡು ಆಟೋರಿಕ್ಷಾಗಳಲ್ಲಿ ನಿಗದಿತ ದರಕ್ಕಿಂತ ಹೆಚ್ಚಿಗೆ ದರವನ್ನು ವಸೂಲಿಸುವಂತಹ ಹಾಗೂ ಮೀಟರ್‌ಗಳನ್ನು ಟ್ಯಾಂಪರ್ ಮಾಡಿಕೊಂಡು

ಹೆಚ್ಚಿಗೆ ದರವನ್ನು ವಸೂಲಿ ಮಾಡುವಂತಹ ಪ್ರಕರಣಗಳನ್ನು ಪತ್ತೆ ಹಚ್ಚಿ, ಅಂತಹ ಪ್ರಕರಣಗಳಲ್ಲಿ ಚಾಲಕರ/ಮಾಲೀಕರ ವಿರುದ್ಧ ಮೊಕದ್ದಮೆಯನ್ನು ದಾಖಲಿಸುವುದು ಹಾಗೂ ದಂಡವನ್ನು ವಸೂಲಿ ಮಾಡುವ ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಇಲ್ಲ.

256 (639) : ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನರಸಿಂಹರಾಜಪುರ ತಾಲ್ಲೂಕು ಹೊನ್ನೆಕುಡಿಗೆ ಏತ ನೀರಾವರಿ ಯೋಜನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಇದರ ಅಂದಾಜು ವೆಚ್ಚ ಎಷ್ಟು;

ಇ) ಈ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

257(640) : Sri Jeevaraj D.N. (Sringeri)

a) Whether it has come to the notice of Government that because of the development of IT Parks only in the Hosur Road and because of hike in the sales tax structure in the State, computers and its accessories are purchased from Hosur; if so what are the steps taken by the government;

b) Hasn't the continued development of IT Parks in Hosur Road aggravated the traffic density;

c) Whether Government considers development of IT Parks in the areas like Mysore Road, Hassan & Tumkur Roads to ensure comprehensive Balanced growth?

Sri Dharm Singh (Chief Minister)-

a) No. Does not arise

b) Government had initially established Electronics city in Hosur Road for the growth of electronic industries. In the same area, STPI has also been established to provide necessary bandwidth and other facilities to IT companies As such more number of IT companies have